ಶ್ರೀ. ನವೀನ್ ಕೆ.ಎಸ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಸಭೆ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರ:

ರಾಜ್ಯದಲ್ಲಿ ರೈತರಿಗೆ ಬೇಕಾದ ರಸಗೊಬ್ಬರ ಸರಿಯಾದ ಸಮಯದಲ್ಲಿ ಪೂರೈಕೆಯಾಗುತ್ತಿಲ್ಲದಿರುವ ಕುರಿತು ಎರಡು ದಿನಗಳಿಂದ ಉತ್ತಮ ಮಳೆ ಬೀಳುತ್ತಿರುವುದರಿಂದ ಬೆಳೆಗೆ ಗೊಬ್ಬರ ಹಾಕಿದರೆ ಉತ್ತಮ ಫಲ ಸಿಗುವುದು ಅಲ್ಲದೆ ಬಿತ್ತನೆ ಮಾಡುವ ಸಂಧರ್ಭದಲ್ಲೂ ಗೊಬ್ಬರ ಹಾಕಿದರೆ ಮೊಳಕೆ ಉತ್ತಮವಾಗಿ ಬರಲಿದೆ ಎಂಬ ನಿರೀಕ್ಷೆಯಲ್ಲಿ ರೈತರು ಗೊಬ್ಬರಕ್ಕಾಗಿ ಟಿಎಪಿಸಿಎಮ್ಎಸ್ ಬಳಿ ಸಾಲು ನಿಂತರೂ ಸಿಗದ ಕಾರಣ ನಿರಾಶರಾಗಿದ್ದಾರೆ. ರೈತರು ಮಳೆ ಬೀಳುತ್ತಿರುವುದರಿಂದ ಸಕಾಲಕ್ಕೆ ರಾಗಿ, ಮುಸುಕಿನಜೋಳ ಬಿತ್ತನೆಗೆ ಕಾರ್ಯದಲ್ಲಿ ಮುಂದಾಗಿದ್ದಾರೆ. ಆದರೆ, ಬಿತ್ತನೆಗೆ ಅಗತ್ಯ ಇರುವ ಡಿಎಪಿ ರಸಗೊಬ್ಬರ ದೊರೆಯದೆ ರೈತರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಡಿಎಪಿ ಗೊಬ್ಬರದ ದಾಸ್ತಾನೇ ಇಲ್ಲ. ಮಳೆ ಸಂದರ್ಭದಲ್ಲಿ ಬಿತ್ತನೆ ಕಾರ್ಯವೂ ಜತೆಜತೆಯಾಗಿ ನಡೆಯುವುದರಿಂದ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗಲಿದೆ. ಈ ಕಾರಣದಿಂದ ಗೊಬ್ಬರದ ಜತೆಯಲ್ಲಿ ಬಿತ್ತನೆ ಮಾಡುವುದು ರೈತರಲ್ಲಿನ ಬೇಸಾಯದ ಪದ್ಧತಿಯಾಗಿದೆ. ಅತಿ ಹೆಚ್ಚು ರಸಗೊಬ್ಬರ ಮಾರಾಟ ಮಾಡುವ ನಗರದ ಟಿಎಪಿಎಂಸಿಎಸ್ ಸೇರಿದಂತೆ ಯಾವುದೇ ರಸಗೊಬ್ಬರ ಮಾರಾಟಗಾರರ ಬಳಿಯು ಡಿಎಪಿ ರಸಗೊಬ್ಬರ ದಾಸ್ತಾನು ಇಲ್ಲದಾಗಿದೆ. ಸಾಮಾನ್ಯವಾಗಿ ರಾಗಿ ಬಿತ್ತನೆ ಸಂದರ್ಭದಲ್ಲಿ ಬಹುತೇಕ ಎಲ್ಲಾ ರೈತರು ಮೂಲ ಗೊಬ್ಬರವಾಗಿ ಡಿಎಪಿ ರಸಗೊಬ್ಬರವನ್ನೇ ಹೆಚ್ಚಾಗಿ ಬಳಸುವರು.

**ದಾಸ್ತಾನು ಪರಿಶೀಲಿಸದ ಕೃಷಿ ಅಧಿಕಾರಿಗಳು;**

**ಬರದಿಂದ ಬೆಂದ ರೈತರು ಈಗ ಮಳೆಯಾದ ಕಾರಣ ಬಿತ್ತನೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇದನ್ನು ಅರಿತು ಕೃಷಿ ಅಧಿಕಾರಿಗಳು ಗೊಬ್ಬರವನ್ನು ದಾಸ್ತಾನು ಮಾಡಿಕೊಳ್ಳಬೇಕಿತ್ತು. ಆದರೆ, ದಾಸ್ತಾನು ಮಾಡಿಕೊಳ್ಳದ ಕಾರಣ ರೈತರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ವಾಸ್ತವ ತಿಳಿದು ಸಹ ಕೃಷಿ ಇಲಾಖೆ ಅಧಿಕಾರಿಗಳು ಅಗತ್ಯ ರಸಗೊಬ್ಬರ ರೈತರಿಗೆ ದೊರೆಯುವಂತೆ ಮಾಡಬೇಕು. ಮಳೆ ಬೀಳುವ ಸಮಯದಲ್ಲಿ ಬಿತ್ತನೆ ಮಾಡದೇ ರಸಗೊಬ್ಬರ ದೊರೆತಾಗ ಬಿತ್ತನೆ ಮಾಡಲು ಸಾಧ್ಯವೇ ಎಂದು ರೈತರು ಪ್ರಶ್ನೆ ಮಾಡಿದ್ದಾರೆ. ಸದರಿ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ.**

****************************************

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯವಾದ ರಾಜ್ಯದಲ್ಲಿ ರೈತರಿಗೆ ಬೇಕಾದ ರಸಗೊಬ್ಬರ ಸರಿಯಾದ ಸಮಯದಲ್ಲಿ ಪೂರೈಕೆಯಾಗುತ್ತಿಲ್ಲದಿರುವ ಕುರಿತು, 2024ನೇ ಸಾಲಿನ ಮುಂಗಾರು ಹಂಗಾಮಿಗೆ (ಏಪ್ರಿಲ್-2024 ರಿಂದ ಸೆಪ್ಟೆಂಬರ್-2024 ರವರೆಗೆ) ಒಟ್ಟು 26,80,000 ಮೆ. ಟನ್ ಪ್ರಮಾಣದ ವಿವಿಧ ಗ್ರೇಡ್‌ಗಳ ರಸಗೊಬ್ಬರದ ಬೇಡಿಕೆಯಿದ್ದು, ಏಪ್ರಿಲ್-2024 ರಿಂದ ಜುಲೈ-2024ರ ಮಾಹೆಯವರೆಗೆ 17,58,225 ಮೆ.ಟನ್ ವಿವಿಧ ಗ್ರೇಡ್‌ಗಳ ರಸಗೊಬ್ಬರದ ಬೇಡಿಕೆಯಿರುತ್ತದೆ.

ದಿನಾಂಕ 01.04.2024 ರಿಂದ 19.07.2024 ರವರೆಗೆ 28,96,509 ಮೆ.ಟನ್ ರಸಗೊಬ್ಬರ ಸರಬರಾಜಾಗಿದ್ದು (13,13,675 ಮೆ.ಟನ್ ಪ್ರಮಾಣದ ಆರಂಭಿಕ ಶಿಲ್ಕು ಒಳಗೊಂಡಿರುತ್ತದೆ), ಈ ಪೈಕಿ 14,30,450 ಮೆ.ಟನ್ ಮಾರಾಟವಾಗಿದ್ದು 14,66,059 ಮೆ.ಟನ್ ವಿವಿಧ ಗ್ರೇಡ್‌ಗಳ ರಸಗೊಬ್ಬರದ ದಾಸ್ತಾನಿರುತ್ತದೆ.

ಪ್ರಸ್ತುತ ಮುಂಗಾರು ಹಂಗಾಮಿಗೆ 3,90,000 ಮೆ.ಟನ್ ಪ್ರಮಾಣದ ಡಿ.ಎ.ಪಿ ರಸಗೊಬ್ಬರದ ಬೇಡಿಕೆ ಇರುತ್ತದೆ. ಏಪ್ರಿಲ್-2024 ರಿಂದ ಜುಲೈ-2024ರ ಮಾಹೆಯವರೆಗೆ 2,94,471 ಮೆ.ಟನ್ ಪ್ರಮಾಣದ ಡಿ.ಎ.ಪಿ ರಸಗೊಬ್ಬರದ ಬೇಡಿಕೆಯಿದ್ದು, ದಿನಾಂಕ 19.07.2024ರಂತೆ 3,70,479 ಮೆ.ಟನ್ ರಸಗೊಬ್ಬರ ಸರಬರಾಜಾಗಿದ್ದು(1,71,464 ಮೆ.ಟನ್ ಆರಂಭಿಕ ಶಿಲ್ಕು ಒಳಗೊಂಡಿರುತ್ತದೆ), 2,41,735 ಮೆ.ಟನ್ ಮಾರಾಟವಾಗಿದ್ದು, 1,28,744

ಮೆ.ಟನ್ ದಾಸ್ತಾನು ಇರುತ್ತದೆ. ರೈತರಿಂದ ರಸಗೊಬ್ಬರದ ಕೊರತೆ ಬಗ್ಗೆ ದೂರು ಬಂದಿರುವುದಿಲ್ಲ. ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಇತರೆ ಕಾಂಪ್ಲೆಕ್ಸ್ ರಸಗೊಬ್ಬರಗಳಾದ ಎನ್.ಪಿ.ಕೆ 10:26:26, ಎನ್.ಪಿ.ಕೆ 12:32:16, ಎನ್.ಪಿ.ಕೆ 20:20:0:13 ಇತ್ಯಾದಿ ಗಳನ್ನು ಬಳಸಲು ರೈತರಿಗೆ ವ್ಯಾಪಕ ಪ್ರಚಾರ ನೀಡಲಾಗಿದೆ.

ರಾಜ್ಯದಲ್ಲಿ ರಸಗೊಬ್ಬರಗಳನ್ನು ರೈತರಿಗೆ ಸಕಾಲದಲ್ಲಿ ಮತ್ತು ಸಮರ್ಪಕವಾಗಿ ಸರಬರಾಜು ಮಾಡಲು ಸೂಕ್ತ ಕ್ರಮವಹಿಸಲಾಗಿದ್ದು, ಸರಬರಾಜು ಪ್ರಕ್ರಿಯೆ ಜಾರಿಯಲ್ಲಿರುತ್ತದೆ.ರಸಗೊಬ್ಬರಗಳ ಕೊರತೆಯಾಗದಂತೆ ಸಮರ್ಪಕ ಸರಬರಾಜಿಗೆ ಇಲಾಖೆ ವಹಿಸಿದ ಕ್ರಮಗಳು ಈ ಕೆಳಕಂಡಂತಿವೆ:

1) ಮುಂಗಾರು ಹಂಗಾಮಿನ ಪೂರ್ವದಲ್ಲಿಯೇ ರಸಗೊಬ್ಬರಗಳನ್ನು ಜಿಲ್ಲೆಗಳಲ್ಲಿ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ರಸಗೊಬ್ಬರದ ಬೇಡಿಕೆಯನ್ನು ಅಂದಾಜಿಸಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ಕೇಂದ್ರ ಸರ್ಕಾರದಿಂದ ಹಂಚಿಕೆ ಮಾಡಲಾಗಿರುವ ವಿವಿಧ ರಸಗೊಬ್ಬರಗಳನ್ನು ಜಿಲ್ಲಾವಾರು ಬೇಡಿಕೆಗನುಗುಣವಾಗಿ ನಿಗಧಿಪಡಿಸಿ, ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಸಹಕಾರ ಸಂಘಗಳು ಹಾಗು ಅಧಿಕೃತ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರ ಮುಖಾಂತರ ಸಮರ್ಪಕ ರೀತಿಯಲ್ಲಿ ರೈತರಿಗೆ ವಿತರಿಸಲು ಕ್ರಮ ವಹಿಸಲಾಗಿದೆ.
2) ರಸಗೊಬ್ಬರ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳೊಡನೆ ಪ್ರತಿ ವಾರ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಸಭೆ ನಡೆಸಿ ರಾಜ್ಯಕ್ಕೆ ರಸಗೊಬ್ಬರದ ಸಮರ್ಪಕ ನಿರ್ವಹಣೆಗೆ ಕ್ರಮವಹಿಸಲಾಗಿದೆ. ಹಾಗೆಯೇ ಪ್ರತಿ ಮಂಗಳವಾರ ಕೇಂದ್ರ ರಸಗೊಬ್ಬರ ಮಂತ್ರಾಲಯವು ಸಹ ರಸಗೊಬ್ಬರದ ಸಮರ್ಪಕ ಪೂರೈಕೆ ಮತ್ತು ವಿತರಣೆ ಕುರಿತು ರಾಜ್ಯಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಸಮರ್ಪಕ ವಿತರಣೆಗೆ ಕ್ರಮವಹಿಸಲಾಗಿದೆ.
3) ರಸಗೊಬ್ಬರದ ತೀವ್ರ ಬೇಡಿಕೆಯ ಸಮಯದಲ್ಲಿ ರೈತರಿಗೆ ರಸಗೊಬ್ಬರವನ್ನು ಒದಗಿಸುವ ಸಲುವಾಗಿ ಕಾಪು ದಾಸ್ತಾನು ಯೋಜನೆಯಡಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತರವರ ಮುಖಾಂತರ ರಸಗೊಬ್ಬರವನ್ನು ದಾಸ್ತಾನು ಮಾಡಿ ಸಮರ್ಪಕವಾಗಿ ವಿತರಣೆ ಮಾಡಲಾಗುತ್ತಿದೆ.

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

ಸಂಖ್ಯೆ: AGRI/165/ACT/2024